**ಸ್ಥಳೀಯಾಡಳಿತ ಸಂಸ್ಥೆಗಳು ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಪೂರಕವಾದ ಪ್ರಣಾಳಿಕೆಯ ಅಂಶಗಳು**

ಸಲ್ಲಿಸಿದವರು: ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕಾರ್ಯಾಲಯ
ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ನಮ್ಮೆಲ್ಲರ ಹಕ್ಕೊತ್ತಾಯ:**

- ಗ್ರಾಮ ಸ್ವರಾಜ್ ಕಾನೂನಿಗೆ ವಿರುದ್ಧವಾಗಿರುವ ಸುತ್ತೋಲೆಗಳು ಅಥವಾ ಸರ್ಕಾರಿ ಆದೇಶಗಳನ್ನು ತಕ್ಷಣ ಹಿಂತೆಗೆದುಕೊಳ್ಳುವುದು.
- ಹೊಸ ಗ್ರಾಮ ಪಂಚಾಯತ್‌ಗಳಿಗೆ ಮೂಲಭೂತ ಸೌಕರ್ಯಗಳು ಮತ್ತು ಸಿಬ್ಬಂದಿಗಳನ್ನು ವ್ಯವಸ್ಥೆಯನ್ನು ಕೂಡಲೇ ಮಾಡುವುದು.
- ಕಾಯಿದೆಯಲ್ಲಿ ಹೇಳಿರುವಂತೆ ರಾಜ್ಯ ಬಜೆಟ್‌ನ 20% ಹಣಕಾಸನ್ನು ಯಾವುದೇ ನಿರ್ಬಂಧ ವಿಧಿಸದೇ ಮುಕ್ತ ಅನುದಾನವಾಗಿ ಗ್ರಾಮಾಭಿವೃದ್ಧಿಗೋಸ್ಕರ ಗ್ರಾಮ ಪಂಚಾಯತ್‌ಗೆ ನೇರ ವರ್ಗಾವಣೆ
- ಕಾಯಿದೆಯಲ್ಲಿ ಉಲ್ಲೇಖಿಸಿರುವಂತೆ ಗ್ರಾಮ ಪಂಚಾಯತ್‌ಗಳಿಗೆ 3 ಎಫ್‌ಗಳ (ಹೊಣೆಗಾರಿಕೆ, ಹೊಣೆಗಾರರು ಮತ್ತು ಹಣಕಾಸು) ಹಸ್ತಾಂತರ
- ಕಾಯಿದೆಯಲ್ಲಿ ಹೇಳಿರುವಂತೆ ಪುನರ್‌ರಚಿಸಿದ ತ್ರಿಸ್ಥರ ಪಂಚಾಯತ್‌ಗಳ ಜವಾಬ್ದಾರಿ ನಕ್ಷೆಯ ಜಾರಿ ಮತ್ತು ಅನುಷ್ಠಾನ
- ವಸತಿ ಫಲಾನುಭವಿಗಳ ಆಯ್ಕೆಯೂ ಸೇರಿದಂತೆ ಗ್ರಾಮ ಸಭೆಯ ಸದಸ್ಯರಿಗೆ ಸಂಬಂಧಿತ ಯಾವುದೇ ಕಾರ್ಯಕ್ರಮ / ಯೋಜನೆಗಳ ಫಲಾನುಭವಿಗಳ ಆಯ್ಕೆ ಕಡ್ಡಾಯವಾಗಿ ಗ್ರಾಮ ಸಭೆಯಲ್ಲಿಯೇ ಆಗಬೇಕು.
- ತಳಮಟ್ಟದಿಂದ ಯೋಜನೆ ತತ್ವದಲ್ಲಿ ಗ್ರಾಮ ಪಂಚಾಯತ್ ತಯಾರಿಸಿದ ಮುನ್ನೋಟ ಯೋಜನೆಗೆ ಎಲ್ಲಾ ಹಂತದ ಸರ್ಕಾರಗಳ ಬದ್ಧತೆ ಹಾಗೂ ಕಾಲಮಿತಿಯೊಳಗೆ ಅನುಷ್ಠಾನಕ್ಕೆ ಸರ್ಕಾರದ ಚಾಲನೆ.
- ಪಂಚಾಯತ್ ವ್ಯಾಪ್ತಿಯಲ್ಲಿರುವ ಯಾವುದೇ ಅಧಿಕಾರಿಗಳು ಗ್ರಾಮ ಸರ್ಕಾರಕ್ಕೇ ಉತ್ತರದಾಯಿಗಳು
- ಗ್ರಾಮ ಪಂಚಾಯತ್‌ವ್ಯಾಪ್ತಿಯಲ್ಲಿ ನಡೆಯುವ ಯಾವುದೇ ಉದ್ಯಮ, ವ್ಯವಹಾರಕ್ಕೆ ಗ್ರಾಮ ಪಂಚಾಯತ್‌ನ ಪರವಾನಿಗೆ ಕಡ್ಡಾಯ.
- ಅಭಿವೃದ್ಧಿಗೆ ಪ್ರತ್ಯೇಕ ಅನುದಾನ, ವಿದ್ಯುತ್ ಬಿಲ್, ಕುಡಿಯುವ ನೀರು, ಸಿಬ್ಬಂದಿಗಳ ವೇತನ ಇವುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅನುದಾನ
- ಕಾಲಕಾಲಕ್ಕೆ ಸರಿಯಾಗಿ ಪಂಚಾಯತ್ ಸದಸ್ಯರ, ಸಂಬಂಧಪಟ್ಟ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿ – ಪಂಚಾಯತ್ ಸದಸ್ಯರು ತೀರ್ಮಾನಿಸಿದಂತೆ, ಅಗತ್ಯವಿರುವ ವಿಷಯಗಳಿಗೆ, ಅದಕ್ಕೆ ಸಂಬಂಧಿಸಿದ ಹಣಕಾಸು ನೇರವಾಗಿ ಆಯಾ ಹಂತದ ಪಂಚಾಯತ್‌ಗಳಿಗೆ.

**ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿ ನೀಡಿದ ವರದಿಯ ಶಿಫಾರಸ್ಸುಗಳಿಂದ ಕೈಬಿಟ್ಟು ಹೋಗಿರುವ ಪ್ರಮುಖ ಅಂಶಗಳ ಪುನರ್–ಸೇರ್ಪಡೆಗೆ ಹಕ್ಕೊತ್ತಾಯ**

- ತ್ರಿಸ್ಥರ ಪಂಚಾಯತ್ ಅಧ್ಯಕ್ಷರೇ ಆಯಾ ಹಂತದ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕರು
- ಗ್ರಾಮ ಪಂಚಾಯತ್‌ನ ಅಧ್ಯಕ್ಷರಿಗೆ ಖಾಸಗಿ ಕಾರ್ಯದರ್ಶಿ (ಆಪ್ತಸಹಾಯಕರು) ನೇಮಕ ಮಾಡಿಕೊಳ್ಳುವ ಅವಕಾಶ
- ಪೂರ್ಣಾವಧಿ ಕೆಲಸ ಮಾಡುವ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಸೂಕ್ತ ಗೌರವಧನ.
- ಗ್ರಾಮ ಪಂಚಾಯತ್ ಎಲ್ಲಾ ಸಿಬ್ಬಂದಿಗಳಿಗೆ ವೇತನ, ನಿರ್ದೇಶನಗಳನ್ನು ನೀಡುವ ಅಧಿಕಾರ ಸ್ಥಳೀಯ ಸರ್ಕಾರಗಳಿಗೆ ಹಾಗೂ ಅದಕ್ಕಾಗಿ ಪ್ರತ್ಯೇಕ ಅನುದಾನ
- ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ಯಾವುದೇ ಇಲಾಖಾ ಕಾರ್ಯಕ್ರಮದ ಸಂಪೂರ್ಣ ಮಾಹಿತಿ ಗ್ರಾಮ ಪಂಚಾಯತ್‌ಗೆ ನೀಡುವುದು ಮತ್ತು ಗ್ರಾಮ ಸಭೆಯು ಕಾಮಗಾರಿ ಪರಿಶೀಲಿಸುವ ಅಧಿಕಾರ ಹಾಗೂ ವರದಿಯನ್ನು ಗ್ರಾಮ ಸಭೆಗೆ ನೀಡುವುದು ಕಡ್ಡಾಯ.
- ಪಂಚಾಯತ್‌ಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಶೌಚಾಲಯಗಳು ಮತ್ತು ನಿರೀಕ್ಷಣಾ ಕೊಠಡಿಗಳ ರಚನೆ
- ಮದ್ಯ ಮಾರಾಟ ಅಥವಾ ಜೂಜಾಟಕ್ಕೆ ಸಂಬಂಧಿಸಿದಂತೆ ಸ್ಥಳ ನಿರ್ಧಾರ ಮತ್ತು ಪರವಾನಿಗೆ ಕೊಡುವ ಅಧಿಕಾರ ಗ್ರಾಮ ಸರ್ಕಾರಕ್ಕೇ
- ಗ್ರಾಮ ಮಟ್ಟದಲ್ಲಿ ಸಂಬಂಧಿತ ದೂರು (ಸಂಕಷ್ಟ) ನಿವಾರಣೆಗೆ ಅವಕಾಶ
- ಪ್ರತಿನಿಧಿತ್ವವನ್ನು ಪ್ರಬುದ್ಧವಾಗಿ ನಿಭಾಯಿಸದ ವಾರ್ಡ್‌ನ ಸದಸ್ಯರನ್ನು ಹಿಂದಕ್ಕೆ ಕರೆಸಿಕೊಳ್ಳುವ ಹಕ್ಕು ವಾರ್ಡ್ ಸಭೆಗೆ
- ಏಕಸದಸ್ಯ ಮತಕ್ಷೇತ್ರ ರಚನೆ
- ಚುನಾವಣಾ ಖರ್ಚುಗಳಿಗೆ ರಾಜ್ಯ ಸರ್ಕಾರದಿಂದ ಹಣಕಾಸು